Regd No. M. 1299 SATYAVADI Founded 1917

# ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 112 ] ಶುಕ್ರವಾರ 3—1—47 [ ಬಿಡಿ ಪ್ರತಿ 3 ಪೈ.

## ಲಂಚಕೋರ ಅಮೇರಿಕಾ ಮಾಜಿ ಗೌರ್ನರೊಬ್ಬ

ನ್ಯೂಯಾರ್ಕ್ ಜ 2 — 8 ವರ್ಷಗಳ ಕಾಲ ಮಿಸಿಸಿಪಿಯ ಗೌರ್ನರಾಗಿದ್ದ ಡಿಗ್ಯೋ ವಿರುದ್ಧ ಯಹೂದಿಯರ ತೀವ್ರ ವಿರೋಧವಿರುವ ಸೆನೇಟರ್ ಬೀ ಬೇ 'ಯುದ್ಧದ ಕಂಟ್ರಾಕ್ಟುಗಳ ವಿನಿಯೋಗ ಸಂಬಂಧದಲ್ಲಿ ತನ್ನ ಸ್ವಂತ ಫಾಯಿದೆಗಾಗಿ ಈ ಭಾರಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುವನು' ಎಂದು ಯುದ್ಧ ತನಿಖಾ ಸಮಿತಿಯವರು ಪ್ರಕಟಿಸಿರುವ ವರದಿಯಲ್ಲಿ ಅಡಕವಾಗಿದೆ. ಈತನ ಕಾರ್ಯಾಚರಣೆ ವಿಷಯದಲ್ಲಿ ನ್ಯಾಯ ಖಾತೆಯು ತನಿಖೆ ನಡೆಸುತ್ತಿರುವುದೆಂದು ಹೇಳಲಾಗಿದೆ. ಬೀಚೋ ತಾನು ಹೊಡೆಯುವುದಾಗಿಯೂ ಹೆದರುವುದಿಲ್ಲವೆಂದೂ ತಾನೇನೂ ತಪ್ಪು ಮಾಡಿಲ್ಲವೆಂದರು ಹೇಳುತ್ತಾನೆ. 'ಕಂಟ್ರಾಕ್ಟರುಗಳು ಅವರಿಗೆ ಸಹಾಯ ಮಾಡಿದ ರಾಜಕೀಯವೇತ್ತಾರಿಗೆ ಕೊಡುವ ಬಹುಮಾನಗಳು ಬಂದು ಮಾಮೂಲು ಪದ್ಧತಿಯೆಂದೂ ಅವರಲ್ಲೇನೂ ತಪ್ಪಿಲ್ಲವೆಂಳೂ ಬೀಚೋ ಅಭಿಪ್ರಾಯವಾಗಿದೆ.

### ಗುಂಡು ಹಾರಿಸಲಾಯಿತು

ಕಲ್ಲೀಕೋಟೆ ಜ 1 — ಸಶಸ್ತ್ರ ಕಮ್ಯೂನಿಸ್ಟರಿಗೂ ಸ್ಪೆಷಲ್ ಪೋಲೀಸರಿಗೂ ಹೊಡೆದಾಟವಾಗಿ ಪೋಲೀಸರು ಗುಂಡು ಹಾರಿಸಿದರು.

### ಎಲಿಜಬೆತ್ ರಾಜಕುಮಾರಿ

ಲಂಡನ್ ಜ 1 — ಬ್ರಿಟಿಷ್ ಚಕ್ರಾಧಿಪತ್ಯದ ಮುಂದಿನ ರಾಣಿಯಾದ ರಾಜಕುಮಾರಿ ಫಿಲಿಮ್‌ರೊಂದಿಗೆ ವಿವಾಹ ಸಂಭವವೆಂದು ಸುದ್ದಿ ಸರಿಯಲ್ಲವೆಂದು ಹೇಳಲಾಗಿದೆ.

### ತಿರುವಾಂಕೂರು ಮಹಾರಾಜರು

ಮದರಾಸು ಜ 2 — ತಿರುವಾಂಕೂರು ಮಹಾರಾಜರೂ ಮಹಾರಾಣಿ ಶ್ರೀಮತಿ ಪಾರ್ವತಿಬಾಯಿಯವರೂ ದಿವಾನರು ಬಂದಿದ್ದಾರೆ. ಕೆಲ ದಿವಸ ತಂಗುವರು.

### ಮೈಸೂರು ಗಾಂಜ ವಶಪಡಿಸಿಕೊಳ್ಳಲಾಯಿತು

ಮದನಪಲ್ಲಿ — ವಯಲ್ವಾಡು ತಾಲೂಕಿಗೆ ಪಕೀರ್ ಸಾಹೇಬ್ ಎಂಬಾತ ಗುಟ್ಟಾಗಿ ಸಾಗಿಸುತ್ತಿದ್ದ 216 ತೊಲೆ ಮೈಸೂರು ಗಾಂಜವು ಪತ್ತೆ ಮಾಡಿ ಆತನಿಂದ ಸ್ವಾಧೀನ ಪಡಿಸಿಕೊಳ್ಳಲಾಗಿದೆ.

## ಶ್ರೀಮನ್ಮಹಾರಾಜರವರ ಕೃಪಾಶಯದಲ್ಲಿ ಜವಾಬ್ದಾರಿ ಸರ್ಕಾರ

### ಮಹಾಪ್ರಭುಗಳಿಗೆ ಮೈಸೂರು ಕಾಂಗ್ರೆಸ್ಸಿನ ಮನವಿ

ಬೆಂಗಳೂರು ಜ 2— ಮೈಸೂರು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸುವ ಬಗ್ಗೆ ಈ ರೀತಿ ನಿರ್ಧರಿಸಿದೆ—

"ಶ್ರೀಮನ್ಮಹಾರಾಜರವರ ಕೃಪಾಶಯದಲ್ಲಿ ಮೈಸೂರು ಸಂಸ್ಥಾನದಲ್ಲಿ ಕೂಡಲೇ ಜವಾಬ್ದಾರಿ ಸರಕಾರ ಸ್ಥಾಪನೆಯಾಗಬೇಕು. ಈ ಮಹಾ ವಿಷಯದಲ್ಲಿ ಆಳುಪ ಮಹಾಸ್ವಾಮಿಯವರಿಗೆ ವಿನಂತಿ ಪತ್ರ ಬರೆಯಬೇಕು."

ಪತ್ರವನ್ನು ಕಾರ್ಯಕಾರಿ ಸಮಿತಿ ತ್ವರೆಯಿಂದ ಸಿದ್ಧಗೊಳಿಸುತ್ತಿದೆ

—

### ಯುದ್ಧಕಾಲದ ವಿಶೇಷಾಧಿಕಾರ ವಜಾ

ವಾಷಿಂಗ್ಟನ್ ಡಿ 31 — ಯುದ್ಧ ಕಾಲದಲ್ಲಿ ಅಮೇರಿಕಾ ಸರಕಾರಕ್ಕೆ ಕೊಡಲಾಗಿದ್ದ ವಿಶೇಷಾಧಿಕಾರಗಳನ್ನೆಲ್ಲಾ ಪ್ರೆಸಿಡೆಂಟ್ ಟ್ರೂಮನ್ನರು ಈಗ ವಜಾ ಮಾಡಿದ್ದಾರೆ

## ಸ್ವತಂತ್ರ ಜರ್ಮನಿ ಸ್ಥಾಪನೆ

—೦—

ಮ್ಯೂನಿಕ್, ಜ 1 — ಜರ್ಮನಿಗೂ ಮತ್ತು ಮಿತ್ರರಾಷ್ಟ್ರಗಳಿಗೂ ಒಪ್ಪಂದವಾಗಿ, ಸ್ವತಂತ್ರ ಜರ್ಮನಿಯುವುನರ್ರಚನೆಯನ್ನು ಆರಂಭಿಸಬೇಕೆಂದು ಬವೇರಿಯಾ ನೂತನ ಪ್ರಧಾನಿ ನೂತನ ನೂತನ ವರ್ಷದ ಬ್ರಾಡ್‌ಕಾಸ್ಟ್‌ನಲ್ಲಿ ಹೇಳಿದ್ದಾರೆ.

### ಮೊಕದ್ದಮೆ ವಜಾ

ಬೆಂಗಳೂರು, ಜ 2 — ಪ್ರಜಾಪ್ರತಿನಿಧಿ ಸಭಾಸದರಾದ ಶ್ರೀ ಜಿ. ಮಂಜಪ್ಪನವರ ಮೇಲೆ ದಾವಣಗೆರೆಯ ನಿ || ಅ || ಪೋ || ಸೂ || ಶ್ರೀ ಪೂರ್ಣಾಚಾರ್ಯರು ಹೂಡಿದ್ದ ಮಾನನಷ್ಟ ಮೊಕದ್ದಮೆಯನ್ನು ಜಿಲ್ಲಾ ನ್ಯಾಯಾಧೀಶರು ವಜಾ ಮಾಡಿದರು.

### 'ಬಿ' ಕ್ಲಾಸ್ ನಿಯೋಗ ದಿವಾನರಲ್ಲಿ ಭೇಟಿ

ಬೆಂಗಳೂರು, ಜ 2 — 500 ಮುಂದಿ 'ಬಿ' ಕ್ಲಾಸ್ ರೇಷ್ ಕಾರ್ಡಿನವರು ದಿವಾನರನ್ನು ಭೇಟಿ ಮಾಡಿ ತಮ್ಮ ಕುಂದುಕೊರತೆಗಳನ್ನು ವಿವರಿಸಿದರು. ದಿವಾನರು ಸಾವಧಾನವಾಗಿ ವಿಚಾರಗಳನ್ನು ತಿಳಿದುಕ್ಕೊಂಡರು.

ಏಶ್ವಕರ್ಣಾಟಕ, ಪ್ರಜಾಮತ, ಜನವಾಣಿ ಮುಂತಾದ ಮೈಸೂರಿನ ಪತ್ರಿಕೆಗಳು ಪ್ರಶಂಸಿಸಿರುವ, ರಾಮರಾಜ್ಯದ ಮಧುರ ಗಾಯಕಿ ರಂಜನಾ ನಟಿಸಿರುವ

ಪ್ರಕಾಶ್‌ರವರ 'ಹಮಾರ ಸಂಸಾರ್'

3-1-47 ರಿಂದ .... .... ರಾಜಕಮಲ್

2 ನೇ ವಾರ .... .... ಟಾಕೀಸಿನಲ್ಲಿ

Morning Shows at 10-30 A. M. From 3 - 1 - 47

Eddie Cantor — in — KID FROM SPAIN

Vijaya Agencies, Mysore

## 5 ಗಜಾ ಬಟ್ಟೆ !

### ಕಾಳಸಂತೆ ಅಭಿವೃದ್ಧಿಗೊಳ್ಳುತ್ತೆ !

ಮದರಾಸು ಜ 2— ಬಟ್ಟೆ ಉಪಯೋಗಿಸುವವರಲ್ಲಿ ತುಂಬಾ ಒಡನರು ಒಬ್ಬೆಯ ಕಾಳಸಂತೆ ವ್ಯಾಪಾರಕ್ಕೆ ತೊಡಗುವರು. ಉತ್ತಮ ಮಧ್ಯಮ ತರಗತಿಯ ಜನರಿಗೆ 5 ಗಜ ಬಟ್ಟೆ ಸಾಲದಾದುದರಿಂದ, ಅವರು ಬಡವರ ರೇಷ್ ಕಾರ್ಡುಗಳಿಗೆ ಹೆಚ್ಚು ಪೌಲ್ಯ ಕೊಡಲು ಚಪಲಪಡುವ್ದು ಸ್ವಾಭಾವಿಕವೇ ಸರಿ, ಎಂದು ಮದರಾಸು ಜವಳಿ ವರ್ತಕ ಸಂಘದ ಅಧ್ಯಕ್ಷರಾದ ಶ್ರೀ ಡೊಟಯಾರವರು ಹೇಳಿಕೆಇತ್ತಿರುವರು.

### ಇರ್ವಿನ್ನರ ವದನಕ್ಕೆ ಮಸಿ ಬಳಿಯಲಾಗಿದೆ

ನವದೆಹಲಿ ಜ 3— ಮಾಜಿ ವೈಸರಾಯ್ ಲಾರ್ಡ್ ಇರ್ವಿನ್ನರ ಪ್ರತಿಮೆಯ ಮುಖಕ್ಕೆ ಕೆರವು ಬಣ್ಣ ಬರೆಯಲ್ಪಟ್ಟಿದೆ. ನವ ವರ್ಷದ ದಿವಸದ ಆನಂದದಲ್ಲಿ ಯಾರೋ ಒಳದಿರಬೇಕು.

### ಕೊಬ್ಬರಿ ಬೆಲೆ

ಭಾರತ ಸರಕಾರದವರು ಕೊಬ್ಬರಿ ಮತ್ತು ಕೊಬ್ಬರಿ ಎಣ್ಣೆ ಬೆಲೆ ನಿರ್ಷರ್ಷಿಸಿರುವುದರಿಂದ ತಿಪಟೂರಿನಲ್ಲೂ ಬೆಲೆ ತಗ್ಗುತ್ತಿದೆ. ಕೊಳ್ಳುವವರು ಅಷ್ಟು ಮುಂದರಿಗಿಲ್ಲವೆಂದು ತಿಳಿಯು ಬಂದಿದೆ.

### ಶ್ರೀ ಭಾಗವತ ಪಠನ ಸಪ್ತಾಹ

ಮೈಸೂರು ಜ 3— ರಾಜಧಾನಿಯ ಪಮಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಅಹೋಬಲಮಠ ಸ್ವಾಮಿ ದೇವಸ್ಥಾನದಲ್ಲಿ ತಾ || 1-1-47 ನೇ ಬುಧವಾರ ಲಾಗಾಯ್ತು ನಿತ್ಯವೂ ಸಾಯಂಕಾಲ 6 ರಿಂದ 8 ರವರೆಗೆ ತತ್ವಪ್ರಜ್ಞೋದನಕವಿ ವಿದ್ವಾನ್ ವೇ || ಬ್ರಂ || ಶ್ರೀ || ಹೆಚ್. ಭೀಮರಾವ್ ಬಿ. ಎ., ಬಿ. ಎಲ್., (ಉರುಫ್) ಶ್ರೀ ಕೃಷ್ಣ ವಿಠಲದಾಸರವರಿಂದ, ಮಹಾಜನರ ಕೋರಿಕೆಯಂತೆ— ಶ್ರೀಮದ್ಭಾಗವತದ ದಶಮ ಸ್ಕಂಧವನ್ನು ಗಮಕಕಲಾರೂಪವಾಗಿ ಪಠಿಸುವ ರೀತ್ಯಾ ಸಪ್ತಾಹವನ್ನೇರ್ಪಡಿಸಿದೆಯಾಗಿ ಕನ್ನಡ ಪ್ರೇಮಿಗಳೆಲ್ಲರೂ ದಯಮಾಡಿಸಬೇಕೆಂದು ಶ್ರೀ ಕೆ. ರಾಮರಾವ್ ಪ್ರಾರ್ಥಿಸಿರುತ್ತಾರೆ.

---

ಶ್ರೀ ಕೃಷ್ಣರಾಯರು ಶ್ರೀ ಛತ್ರಪತಿ ಶಿವಾಜಿ ಮಹಾರಾಜರು ಮುಸಲ್ಮಾನರು ರಾಜ್ಯಾಧಿಕಾರ ವ್ಯಾಪ್ತಿಯನ್ನು ತಜೆದ ರಾಗಲಿ ಇಸ್ಲಾಂ ಮತವನ್ನು ಹೀನವಾಗಿ ಕಾಣಲಿಲ್ಲ. ಮಸೀದಿಗಳನ್ನು ಕಟ್ಟಿಸಿದರು. ಮಾನ್ಯಗಳನ್ನು ಕೊಟ್ಟರು, ಹಿಂದೂ ರಾಜರ ವಿಕಸಿಕಹೃದಯ ಸ್ಥಿತಿಯು ಇಂತಹುದು.

## ಸಕ್ಕರೆ ಕೆಲಸಗಾರರ ಮುಷ್ಕರವಿಲ್ಲ

### ಬೇಡಿಕೆಗಳು ನೆರವೇರಲ್ಪಟ್ಟವು

ಮೈಸೂರು ಸಕ್ಕರೆ ಕಂಪೆನಿ ಕೆಲಸಗಾರ ಸಂಘದವರು ನಾಲ್ಕು ಬೇಡಿಕೆಗಳನ್ನು ಅಂದರೆ (1) ಷೆಡ್ಯೂಲ್ ಆಫ್ ವೇಜಸ್ 1-7-46 ರಿಂದ ಜಾರಿಗೆ ತರುವುದು (2) ಭದ್ರಾವತಿಯಲ್ಲಿ ಕೊಡುವಂತೆ ದಿನಕೂಲಿಯವರಿಗೆ ಸಂಬಳ ಸಹಿತ 23 ದಿನಗಳ ರಜಾ ಕೊಡುವುದು. (3) ಇನ್ನೊಂದು ತಿಂಗಳ ಬೋನಸ್ ಕೊಡುವುದು. (4) ಶ್ರೀ ಕಾಳಯ್ಯನವರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವುದು. 30-12-46 ರಿಂದ ಈಡೇರಿಸಿ ಕೊಡದಿದ್ದರೆ 1-1-47 ರಿಂದ ಸಾರ್ವತ್ರಿಕ ಮುಷ್ಕರ ಹೂಡುವುದಾಗಿ ನಿರ್ಧರಿಸಿ ಆಡಳಿತ ಮಂಡಲಿಗೆ ನೋಟೀಸ್ ಕೊಟ್ಟಿದ್ದರು. ಆಡಳಿತ ಮಂಡಲಿಯು ಮುಷ್ಕರ ಸಮಿತಿಯೂ ಕಲೆತು ಮಾತನಾಡಿದ ನಂತರ 1 ಮತ್ತು 2 ನೇ ಯವುಗಳನ್ನು ಕೂಡಲೇ ಜಾರಿಗೆ ತರುವುದಾಗಿಯೂ 3 ಮತ್ತು 4 ನೇ ಯವುಗಳನ್ನು ಪಂಚಾಯಿತಿ ಕೋರ್ಟಿಗೆ ಕಳುಹಿಸುವುದಾಗಿಯೂ ಆಡಳಿತ ಮಂಡಲ ಒಪ್ಪಿ ಲಿಖಿತ ಮೂಲಕ ಒಪ್ಪಂದವಾಯಿತು. ಅಲ್ಲದೆ ಪಂಚಾಯಿತಿ ಕೋರ್ಟಿಗೆ ಒಪ್ಪಿಸುವ ಪತ್ರ ರಿಜಿಸ್ಟ್ರಾರವರಿಗೆ ಮುಷ್ಕರ ಸಮಿತಿ ರೂಬುರೂಬು ಕಳುಹಿಸಲಾಯ್ತು. ಆದ್ದರಿಂದ ಮುಷ್ಕರ ಸಮಿತಿಯವರು ಸಭೆ ಸೇರಿ ಹಿಂದೆ ಕೊಟ್ಟಿದ್ದ ಮುಷ್ಕರ ನೋಟೀಸನ್ನು ಹಿಂದಕ್ಕೆ ಪಡೆಯ ತಕ್ಕ ದೆಂದು ತೀರ್ಮಾನಿಸಿದರು 1-1-47 ರಿಂದ ನಡೆಯಬೇಕಾಗಿದ್ದ ಮುಷ್ಕರ ನಡೆಯುವುದಿಲ್ಲ. ಆದ್ದರಿಂದ ಕೆಲಸಗಾರರೆಲ್ಲರೂ ತಪ್ಪದೆ ಮಾಮೂಲಿನಂತೆ ಕೆಲಸಕ್ಕೆ ಹೋಗಬೇಕಾಗಿ ಕೋರಿಕೆ.

ಎ. ರಾಮಣ್ಣ,
ಸಂಚಾಲಕ
ಮುಷ್ಕರ ಸಮಿತಿ

1-1-47
ಮಂಡ್ಯ

### ಬಹಿರಂಗ ಸಭೆ

ಮಂಡ್ಯ ಜ 1— ನಿನ್ನೇ ಸಾಯಂಕಾಲ ಕಾರ್ಖಾನೆ ಮುಂಭಾಗದ ಮೈದಾನದಲ್ಲಿ ಮುಷ್ಕರ ಸಮಿತಿಯ ಆಶ್ರಯದಲ್ಲಿ ಕೆಲಸಗಾರರ ಬಹಿರಂಗ ಸಭೆ ಸೇರಿದ್ದಿತು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಮಹಾಬಲರಾಯರು ಅಧ್ಯಕ್ಷತೆ ವಹಿಸಿದ್ದರು. ಮುಷ್ಕರ ಸಮಿತಿ ಸಂಚಾಲಕರಾದ ಶ್ರೀ ಎ. ರಾಮಣ್ಣನವರು ಆಡಳಿತ ಮಂಡಲಿಗೂ ಮುಷ್ಕರ ಸಮಿತಿಗೂ ಆದ ಒಪ್ಪಂದವನ್ನು ವಿವರಿಸಿ 1-1-47 ರಿಂದ ಮುಷ್ಕರ ನಡೆಯುವದಿಲ್ಲವೆಂದೂ ಎಲ್ಲರೂ ಕೆಲಸಕ್ಕೆ ಮಾಮೂಲಿನಂತೆ ಹೋಗಬೇಕೆಂದೂ, ಕೋರಿದರು. ಮುಷ್ಕರಕ್ಕೆ ಸಿದ್ಧರಾಗಿದ್ದ ಎಲ್ಲಾ ಕೆಲಸಗಾರರಿಗೂ ಮುಷ್ಕರ ನಡೆಯದಂತೆ ಯತ್ನಿಸಿ ಒಪ್ಪಂದಕ್ಕೆ ಬಂದ ಜನರಲ್ ಮೇನೇಜರಿಗೂ ವಂದನೆಗಳನ್ನು ಸಲ್ಲಿಸಿದರು. ಇದೇ ರೀತಿ ಕೆಲಸಗಾರರು ಒಗ್ಗಟ್ಟಿದೆಂದ ಇರಬೇಕೆಂದು ಹೇಳಿ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.


# ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

**ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.**

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒರಿದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

— ನಮ್ಮ ಶ್ರೀ ಟ್ರಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

**ವಲ್ಲಭದಾಸ್ ತೇಜ್‌ಪಾಲ್,**

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

**೧೪. ಗೋವಿಂದಪ್ಪ ನಾಯಕ್‌ರಸ್ತೆ, ಜಿ. ಟಿ. ಮದರಾಸು.**

# At Opera ☰ 3rdCrowded House Week

# ನಾರದ - ನಾರದಿ

# From 4-1-47 ☰ Daily 3 Shows

# THE GREAT MAGICIAN

**Bela Lagosi — Maria Alba — Lucian Preibal**

Morning Shows .... .... HELLO BEAUTIFUL

# At Ranjit____ From 3-I-47

# C A R A V A N

ಅರೂಪ್ — ಕಮಲಾ ಚಟರ್ಜಿ — ಪಾತ್ರವಹಿಸಿರುವೆ

# ಕಾರವಾನ್

# ವೈಟೋಫೆರಿನ್

ಎ, ಬಿ, ಮತ್ತು ಡಿ ಎಂಬ ಶರೀರ ಪೋಷಕ ವೈಟಮಿನ್‌ಗಳಿಂದಲೂ, ಐರನ್ ಕ್ಯಾಲ್ಸಿಯಂ ಮತ್ತು ಫೊಟಾಸಿಯಂ ಎಂಬ ಲೋಹ ವಿಶೇಷಗಳಿಂದಲೂ ಕೂಡಿ, ಜೀನುತುಪ್ಪ ಮತ್ತು ಮಾಲ್ಟ್ ಸಾರಗಳಿಂದ ಬೆರೆತ ಉತ್ತಮ ವರ್ಗದ ಟಾನೀಕು.

ವೈಟಮಿನ್ನುಗಳ ಅಭಾವತೆಯಿಂದೊದಗುವ ಎಲ್ಲ ಅಸ್ವಸ್ಥತೆಗೂ, ರಕ್ತಹೀನತೆ ದೌರ್ಬಲ್ಯ ಮೊದಲಾದ ದೇಹಾಲಸ್ಯಕ್ಕೂ ಕೊಡಲು ಯೋಗ್ಯವಾದದ್ದು.

——0——

— ಮೈಸೂರಿನಲ್ಲಿ ತಯಾರಾದುದು —

ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ ಲಿಮಿಟೆಡ್

ಮಲ್ಲೇಶ್ವರಂ ಪೋಸ್ಟು .... .... ಬೆಂಗಳೂರು



Edited, Printed and Published by M. S Krishna Rao at the Satyavadi Press ChamarajAgrahar, Mysore.

For Quality Printing

L. N. Pre

Sriramp et, M